matters which will have to be taken into considration. ಮಾನ್ಯ ಸದಸ್ಯರ ಅಭಿಪ್ರಾಯದಲ್ಲಿ ಅವರು ಬೇರೆ ಬ್ಯಾಂಕ್‌ಗಳವರನ್ನು ವಿಚಾರಿಸಿ ಹಣವನ್ನು ಇಡಬೇಕಾಗಿತ್ತು ಎಂದು ಹೇಳಿದರು. ಆದರೆ ಇವತ್ತು ಕರ್ನಾಟಕ ಬ್ಯಾಂಕ್‌ನಲ್ಲಿಯೇ ಹಣವಿರುವುದರಿಂದ, ಹಣ ಸೇನೂ ದುರ್ವಿನಿಯೋಗವಾಗಿಲ್ಲ, ಆದರಿಂದ ಬಡ್ಡಿ ಬರುವುದರಲ್ಲಿ ಏನಾದರೂ ತೊಂದರೆಯಾಗುತ್ತಿದೆಯೇ ? ಸಿಂಡಿಕೇಟ್ ಬ್ಯಾಂಕ್ ಮತ್ತು ಮೈಸೂರು ಬ್ಯಾಂಕ್, ಮತ್ತಿತರ ಬ್ಯಾಂಕ್‌ಗಳಲ್ಲಿ ಇಟ್ಟರೆ ಏನು ಬಡ್ಡಿಯನ್ನು ಕೊಡುತ್ತಾರೆ ಎಂಬುದನ್ನು ವಿಚಾರಿಸದೇ ಇರುವುದು ಅವರ ಒಂದು ಸಣ್ಣ ತಪ್ಪು, ಆದರೆ ಮಾನ್ಯ ಸಸ್ಯರು ಇಂಥ ಒಂದು ಸಣ್ಣ ತಪ್ಪುಗೋಸ್ಕರ ಅಂಥ ದೊಡ್ಡ ದೊಡ್ಡ ಪದಗಳನ್ನು ಉಪಯೋಗ ಮಾಡಬಾರದು

ಶ್ರೀ ಟಿ. ಎಂ. ಮಂಜುನಾಥ್.—ಸ್ವಾಮಿ, ಅವರು ಕಮಿಟಿಯ ಸದಸ್ಯರ ಅಭಿಪ್ರಾಯವನ್ನೇ ಕೇಳಿಲ್ಲ. ೩೦ನೇ ತಾರೀಖು ಚೆಕ್ಕನ್ನು ತೆಗೆದುಕೊಂಡು ಹೋಗಿ ಛೇರ್ಮನ್ ರವರ ಹತ್ತಿರ ಸೈನ್ ಮಾಡಿಸಿದ್ದಾರೆ ಇದಕ್ಕೆ ಕಾರಣ ಕರ್ನಾಟಕ ಬ್ಯಾಂಕ್‌ನಲ್ಲಿ ಹಣವನ್ನು ಡಿಪಾಜಿಟ್ ಮಾಡಿ ಆಮೇಲೆ ಅವರಿಂದ ಸಾಲ ಪಡೆಯಂವುದಕ್ಕೋಸ್ಕರ ಅಧ್ಯಕ್ಷರು ಮತ್ತು ಕೆಲವು ಸದಸ್ಯರುಗಳು ಸೇರಿ ಈ ರೀತಿ ಮಾಡಿದ್ದಾರೆ. ಆಮೇಲೆ ತಾವು ಕೊಟ್ಟಂಥ ಪ್ರಾಮಿಸ್ಸರಿಯನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಸಾರ್ವಜನಿಕರ ಹಣವನ್ನು ತೆಗೆದುಕೊಂಡು ಹೋಗಿ ಕರ್ನಾಟಕ ಬ್ಯಾಂಕ್‌ನಲ್ಲಿ ಡಿಪಾಜಿಟ್ ಮಾಡಿದ್ದಾರೆ ಇದರಿಂದ ಹಣವನ್ನು ದುರುಪಯೋಗಮಾಡಿಕೊಂಡ ಹಾಗೆ ಆಗಲಿಲ್ಲವೇ ? ಅಕ್ರಮವಾಗಿ ದುರ್ವ್ಯವಹಾರ ಮಾಡಿದ ಹಾಗೆ ಆಗಲಿಲ್ಲವೇ ?

SRI K. H. RANGANATH.—Money is there in the bank. I am really sorry. My friend is misusing the privilege.

ಶ್ರೀ ಟಿ ಎಂ. ಮಂಜುನಾಥ್.—ತಾವು ರೂಲ್ಸ್ ಬೈಲಾಸ್‌ನ್ನು ತೆಗೆದುಕೊಂಡು ನೋಡಿ. ೫ ಲಕ್ಷದ ೧೫ ಸಾವಿರ ರೂಪಾಯಿಗಳ ಚೆಕ್‌ಗೆ ಸೈನ್ ಮಾಡಬೇಕಾದರೆ ರೂಲ್ಸ್ ಬೈಲಾಸ್ ಪ್ರಕಾರ ಅಧ್ಯಕ್ಷರು ಕಮಿಟಿಯ ಒಪ್ಪಿಗೆಯನ್ನು ಪಡೆಯಬೇಕಾಗುತ್ತದೆ ಅವರು ರೂಲ್ಸ್ ಬೈಲಾಸ್‌ಗೆ ವಿರುದ್ಧವಾಗಿ ಮಾಡಿರುವುದರಿಂದ ಇದಕ್ಕೆ ಯಾರು ಯಾರು ಸಂಬಂಧಪಟ್ಟಿದ್ದಾರೋ ಅವರ ಮೇಲೆ ಉಗ್ರವಾಗಿ ಕ್ರಮ ತೆಗೆದುಕೊಂಡು ಆ ಸೊಸೈಟಿಯನ್ನು ಸೂಪರ್‌ಸೀಡ್ ಮಾಡುತ್ತೀರಾ ?

SRI K H. RANGANATH.—I am not going to supersede the Society. The committee has not done any offence. After all, it is an omission on the part of the officers which can just be overlooked.

PAPERS LAID ON THE TABLE

SRI H. M. CHANNABASAPPA.—On behalf of the Chief Minister I lay

The Ninth Annual Report of the Karnataka State Vigilance Commission together with Memorandum for the year 1973-74 under rule (7) of the Karnataka Vigilance Commission Rules, 1963.

MADAM SPEAKER.—The Paper is laid.

Objection to move the Public Wakfs (Extension of Limitation) Karnataka Amendment Bill 1976.

MADAM SPEAKER.—The Minister for Agriculture may move the Wakfs Bill.

SRI M. S. KRISHNAN.—I take objection.

ಅಧ್ಯಕ್ಷರು.—ಇದರಲ್ಲಿ ಸಿಂಪಲ್ ಅಮೆಂಡ್‌ಮೆಂಟ್ ಇದೆ. ಅದು ಬಿಟ್ಟು ಇದರಲ್ಲಿ ಮಂತ್ರಿ ಏನಿದೆ ?